ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಮಾತು ಮಾತಿಗೂ ನಕ್ಸಲೀಯರು, ನಕ್ಸಲೀಯರು ಎಂದು.

ಶ್ರೀ ಸಿ.ಟಿ. ರವಿ: ನಿಮಗೇಕೆ ಅಷ್ಟು ಪ್ರೀತಿ? ನನಗೆ ಅರ್ಥವಾಗುತ್ತಿಲ್ಲ. ಆದರೆ ನನ್ನ ಕ್ಷೇತ್ರದಲ್ಲಿ ಅದು ಸಮಸ್ಯೆ. ಇವರ ಕ್ಷೇತ್ರದಲ್ಲಿ ಅವರಿಗೆ ಪ್ರೀತಿಪಾತ್ರರು ನಕ್ಸಲೀಯರು ಆದರೆ ನನ್ನ ಕ್ಷೇತ್ರದಲ್ಲಿ ಜನರಿಗೆ ಸಮಸ್ಯೆಯನ್ನುಂಟು ಮಾಡುತ್ತಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ನಕ್ಸಲೀಯರ ಬಗ್ಗೆ ಕಲ್ಪನೆ ಇಲ್ಲ ನಿಮಗೆ....

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೇ, ಹಾಸ್ಟಲ್‌ಗಳ ಬಗ್ಗೆ ನಿನ್ನೆ ಚಿಕ್ಕಮಗಳೂರು ಜಿಲ್ಲಾ ಪಂಚಾಯತಿ ಸಭೆಯಲ್ಲಿ ಚರ್ಚೆಯಾಗಿದೆ.

ಅಧ್ಯಕ್ಷರು: ಮಾನ್ಯ ರವಿಯವರೇ, ಪ್ರಶ್ನೆಗೆ ಸಂಬಂಧಪಟ್ಟಂತೆ ಉಪ ಪ್ರಶ್ನೆ ಕೇಳಬಹುದೇ ಹೊರತು ನಕ್ಸಲೀಯರದ್ದು ಬೇರೆ ಪ್ರಶ್ನೆಯಾಗುತ್ತದೆ. ದಯಮಾಡಿ ಕೇಳಿ ಆ ಸಂಬಂಧಪಟ್ಟಂತೆ ಸಮಾಜ ಕಲ್ಯಾಣ ಸಚಿವರ ಜೊತೆ ಮಾತನಾಡಿ. ಇದಕ್ಕೆ ಸಂಬಂಧಪಟ್ಟಂತೆ ಉಪ ಪ್ರಶ್ನೆಗಳು ಏನಾದರೂ ಇದ್ದರೆ ಕೇಳಿ.

ಶ್ರೀ ಸಿ.ಟಿ. ರವಿ: ಖಂಡಿತ ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಂತೆಯೇ.....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನಿನ್ನೆ ಜಿಲ್ಲಾ ಪಂಚಾಯತಿ ಸಭೆಯಲ್ಲಿ ಈ ವಿಷಯ ಚರ್ಚೆಯಾಗಿದೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ಈ ಪ್ರಶ್ನೆಗೆ ಅವರು ಏನು ಹೇಳುತ್ತಾರೆ?

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೇ, ನಿನ್ನೆ ಜಿಲ್ಲಾ ಪಂಚಾಯತಿ ಸಭೆಯಲ್ಲಿ ಚರ್ಚೆಯಾಗಿದೆ. ಹಾಸ್ಟೆಲ್‌ಗಳಲ್ಲಿ ನಕ್ಸಲೀಯರು ಸರ್ಕಾರದಿಂದ ಪುಕ್ಕಟೆಯಾಗಿ ಊಟ ಮಾಡಿಕೊಂಡಿದ್ದು ಅಲ್ಲದೇ ವಿದ್ಯಾರ್ಥಿಗಳ ತಲೆ ಕೆಡಿಸುತ್ತಿದ್ದಾರೆಂದು ನಿನ್ನೆ ಜಿಲ್ಲಾ ಪಂಚಾಯತ್ ಸದಸ್ಯರು ಅದೂ ಇವರದ್ದೇ ಕಾಂಗ್ರೆಸ್ಸ್ ಪಕ್ಷದ ಸದಸ್ಯರು ಚರ್ಚೆ ಮಾಡಿದ್ದಾರೆ. ಹಾಗಾಗಿ ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಅದನ್ನು ನಿಯಂತ್ರಿಸುವುದಕ್ಕೆ ಏನು ಕ್ರಮ ಕೈಗೊಳ್ಳುತ್ತಾರೆಂದು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಮಾನ್ಯ ಜೀವರಾಜ್‌ರವರೇ, ಈ ರೀತಿ ಪದೇ ಪದೇ ಸುಮ್ಮನೆ ನಿಂತುಕೊಳ್ಳುವುದು ಇದು ಸರಿಯಾದ ಕ್ರಮ ಅಲ್ಲ. ಒಂದಲ್ಲ ಹತ್ತಾರು ಸಲ ಹೇಳಬೇಕೇನು? ದಯಮಾಡಿ ಕುಳಿತುಕೊಳ್ಳಿ. ಅವರ ಪ್ರಶ್ನೆಗೆ ಉತ್ತರ ಹೇಳುತ್ತಾರೆ ಕುಳಿತುಕೊಳ್ಳಿ.

ಡಾ॥ ವೈ. ನಾಗಪ್ಪ: ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಪೂರ್ಣ ಮಾಹಿತಿ ಇವತ್ತು ನನ್ನಲ್ಲಿ ಇಲ್ಲ. ಅದನ್ನು ತರಿಸಿಕೊಂಡು ನಮ್ಮ ಗೃಹ ಮಂತ್ರಿಗಳ ಜೊತೆ ಚರ್ಚೆ ಮಾಡಿ ಅದನ್ನು ನಿಯಂತ್ರಣಕ್ಕೆ ತರಲಿಕ್ಕೆ ಪ್ರಯತ್ನ ಮಾಡುತ್ತೇನೆ.

ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ ಜಾತಿಗಳು

110 (1418) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳ ಪಟ್ಟಿಗೆ ಈಗಾಗಲೆ ಸೇರಿಸಲ್ಪಟ್ಟ ಜಾತಿಗಳ ಸಂಖ್ಯೆ ಎಷ್ಟು ಹಿಂದುಳಿದ ಜಾತಿಗಳ ಪಟ್ಟಿಗೆ ಸೇರಿಸಬೇಕೆಂದು ಮನವಿ

ಸಲ್ಲಿಸಿರುವ ಜಾತಿ ಜನಾಂಗಗಳ ವಿವರಗಳೇನು :

ಆ) ಮನವಿ ಸಲ್ಲಿಸಿರುವ ಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು :

ಇ) ಈ ಜಿಲ್ಲೆಗಳಲ್ಲಿರುವ ಶೆಟ್ಟಿಗಾರ ಎಂಬ ನೇಕಾರ ವರ್ಗದ ಜಾತಿಯನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲು ಸರ್ಕಾರ ಕ್ರಮ ಜರುಗಿಸುವುದೇ ?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಲಿ 32 ಜಾತಿಗಳನ್ನು ಹಿಂದುಳಿದ ವರ್ಗಗಳ ಜಾತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಪ್ರಸ್ತುತ ಈ ಕೆಳಕಂಡ ಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸುವ ಬಗ್ಗೆ ಕೋರಿಕೆ ಬಂದಿರುತ್ತದೆ.

1. ಕನ್ನಡ ಗೌಡ
2. ಬೈರ್ಯವಾಣಿ
3. ಬೆಲ್ಚದ (ಬೆಲ್ಚದ ಗೆ ಪರ್ಯಾಯವಾಗಿ)
4. ಕುಡಾಲ ದೇಶಸ್ಥ ಗೌಡ್ ಬ್ರಾಹ್ಮಣ
5. ಮುಖಾರಿ
6. ಶೆಟ್ಟಿಗಾರ (ಪದ್ಮಶಾಲಿ ಜಾತಿಗೆ ಪರ್ಯಾಯ ಪದವಾಗಿ)

ಈ ಮನವಿಗಳನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ಪರಿಶೀಲಿಸುತ್ತಿದ್ದು; ಆಯೋಗದಿಂದ ವರದಿ ಬಂದ ನಂತರ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಪ್ರಭಾಕರ ಬಂಗೇರ: ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೆಟ್ಟಿಗೆರ್ ಎಂಬ ಒಂದು ಜಾತಿ ಇದೆ. ಆ ಜಾತಿಯನ್ನು, ಆ ಜಾತಿಯ ಪಟ್ಟಿಯಲ್ಲಿ ಸೇರಿಸಬೇಕೆಂದು ಹೇಳಿದೆ. ಈ ಜಾತಿಯ ಪಟ್ಟಿಯಲ್ಲಿ ಕೋರಿಕೆ ಬಂದಿದೆ ಎಂದು ಮಾತ್ರ ಹೇಳಿದ್ದಾರೆ ವಿನಹಃ ಸೇರಿಸಿದ್ದಾರೆ ಎಂಬುದಾಗಿ ಇಲ್ಲ. ಅದನ್ನು ಯಾವಾಗ ಸೇರಿಸುತ್ತೀರಿ ಎಂಬುದು ಒಂದು. ಅದರೊಟ್ಟಿಗೆ ಕೇರಳ ರಾಜ್ಯದಿಂದ ಸಾಧಾರಣ 30–40 ವರ್ಷಗಳ ಹಿಂದಿನಿಂದಲೂ ಕೂಡ ನಾಯರ್ ಸಮಾಜದವರು ನಮ್ಮ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ, ಈ ಭಾಗಕ್ಕೆ ಬಂದು ಇಲ್ಲಿಯೇ ವಾಸ್ತವವಾಗಿದ್ದಾರೆ. ಆದರೆ ಅವರಿಗೆ ಯಾವುದೇ ಒಂದು ಜಾತಿ ಸರ್ಟಿಫಿಕೇಟ್ ಸಿಗಬೇಕಾಗಿದ್ದಾಗ ನೀವು ಪಟ್ಟಿಯಲ್ಲಿ ಸೇರಿಲ್ಲ ಎಂಬ ವಿಚಾರ ಬಂದಿದೆ. ಕಳದೆ ಅಧಿವೇಶನದಲ್ಲಿಯು ಕೂಡ ಈ ಒಂದು ಪ್ರಸ್ತಾಪವನ್ನು ನಾನು ಹೇಳಿದಾಗ ಇದು ನಮ್ಮ ಇಲಾಖೆಗೆ ಏನೂ ಒಂದು ಮನವಿಗಳು ಬಂದಿಲ್ಲ ಎಂಬ ಮಾತನ್ನು ಹೇಳಿಕೊಂಡು ಈಗಲೂ ಕೂಡ ಆ ಪಟ್ಟಿಯಲ್ಲಿ ಅವರು ಸೇರಿಲ್ಲ, ಅದನ್ನು ಸೇರಿಸುವಂಥಾದ್ದನ್ನು ಖಂಡಿತವಾಗಿ ಕೂಡ ಮಾಡಿ ಅವರಿಗೆ ಜಾತಿ ಸರ್ಟಿಫಿಕೇಟ್ ಸಿಗುವುದಕ್ಕೆ ಮತ್ತು ವಿದ್ಯಾಭ್ಯಾಸಕ್ಕೂ ಕೂಡ ಅನುಕೂಲವಾಗುವಂತಹ ದೃಷ್ಟಿಯಲ್ಲಿ ಮಾಡಬೇಕು. ಅದರೊಟ್ಟಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಚನ್ನದಾಸರ್ ಎಂಬ ಜಾತಿ ಪಟ್ಟಿಯಲ್ಲಿ ಸೇರಿದೆ, ಅವರಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉಡುಪಿ ಜಿಲ್ಲೆಯಲ್ಲಿ ಜಾತಿ ಸರ್ಟಿಫಿಕೇಟ್

ಕೊಡಲಿಕ್ಕೆ ನಿರಾಕರಣೆ ಮಾಡುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಹಾಗಾಗಿ ನಾನು ತಮ್ಮ ಇಲಾಖೆಯ ಗಮನಕ್ಕೂ ಮಾನ್ಯ ಅಧ್ಯಕ್ಷರ ಮೂಲಕ ತರುತ್ತಿದ್ದೇನೆ. ಅವರಿಗೆ ಜಾತಿ ಸರ್ಟಿಫಿಕೇಟ್ ಕೊಡಲಿಕ್ಕೆ ಏನು ತೊಂದರೆ ಇದೆ? ಅವರಿಗೆ ಜಾತಿ ಸರ್ಟಿಫಿಕೇಟ್ ಕೊಡಬೇಕು ಎಂದು ತಮ್ಮ ಮೂಲಕ ನಾನು ವಿನಂತಿ ಮಾಡುತ್ತೇನೆ.

ಡಾ॥ ವೈ. ನಾಗಪ್ಪ: ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉಡುಪಿ ಜಿಲ್ಲೆಯಲ್ಲಿ 32 ಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಪ್ರಸ್ತುತ ಈ ಕೆಳಕಂಡ ಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸುವ ಬಗ್ಗೆ ಕೋರಿಕೆ ಬಂದಿರುತ್ತದೆ. ಯಾವುವು ಎಂದರೆ ಕನ್ನಡ ಗೌಡ, ವೈಷ್ಣವಾಣಿ, ಕೂಡಾಲ, ಗೌಡ ಬ್ರಾಹ್ಮಣ, ಬುಕಾರಿ, ಶೆಟ್ಟಿಗಾರ್ ಪದ್ಮಶಾಲಿ ಇವೆಲ್ಲಾ ಈ ಬೇಡಿಕೆಗಳಲ್ಲಿ ಬಂದಿದೆ. ಇವುಗಳನ್ನು ನಾವೆಲ್ಲಾ ಕ್ರೋಡಿಕರಿಸಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮತ್ತು ಸಮಾಜ ಕಲ್ಯಾಣ ಇಲಾಖಾಧಿಕಾರಿಗಳಿಗೆ ಕಳುಹಿಸಿ ಇದರ ಬಗ್ಗೆ ಮಾಹಿತಿಯನ್ನು ತರಿಸಿ ಚರ್ಚೆ ಮಾಡಿ ಅಷ್ಟು ಸುಲಭವಾಗಿ ನಾವು ಇದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಇದು ಬಹುಶಃ ಈ ಒಂದು ಮೊಸಲಾತಿ ಪದ್ಧತಿ ಏನಿದೆ, ಆ ಸಮಿತಿಗಳು ಏನಿವೆ ಆ ಒಂದು ಸಮಿತಿಗೆ ಇದನ್ನು ಕಳುಹಿಸಿ ಕೊಟ್ಟು ಆಮೇಲೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಅಲ್ಲಿಂದ ಅಪ್ರೂವ್ ಆಗಿ ಬಂದ ಮೇಲೆ ನಾವು ಇಲ್ಲಿ ಸೇರಿಸುತ್ತೇವೆ.

ಶ್ರೀ ಕೆ. ಪ್ರಭಾಕರ ಬಂಗೇರ: ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿಯೂ ಕೂಡ ನಾವು ಕೇಳಿದ್ದೆವು. ಈಗ ತಾವು ಕೇಳಿಕೆ ಬಂದಿಲ್ಲವೆಂದು ಹೇಳಿದಿರಿ. ಅವರು ಕೋರಿಕೆಯನ್ನು ಕೊಟ್ಟಿದ್ದಾರೆ. ನಾಯರ್ ಸಮಾಜದವರು ಕೇರಳದಿಂದ ಬಂದು ಇಲ್ಲಿ ವಾಸ್ತವ ಇದ್ದಾರೆ. ಕರ್ನಾಟಕದಲ್ಲಿ, ಅದೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದ್ದಾರೆ. ಅದನ್ನು ಸೇರಿಸುವಂತಾದ್ದು ಆಗಬೇಕು. ಅದರ ನಂತರ ನಾನು ಕೇಳಿರುವುದು ಪರಿಶಿಷ್ಟ ಜಾತಿಯ ಚನ್ನದಾಸರ್ ಪಟ್ಟಿಯಲ್ಲಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉಡುಪಿ ಜಿಲ್ಲೆಯಲ್ಲಿ ಅವರಿಗೆ ಜಾತಿ ಸರ್ಟಿಫಿಕೇಟ್ ಕೊಡುತ್ತಿಲ್ಲ ಎಂದು ಅವರ ದೂರು ಇದೆ. ಈಗಲೂ ಕೂಡ ನಿರಾಕರಣೆ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಪಟ್ಟಿಯಲ್ಲಿರು ಹಾಗೆ ಇದುವರೆಗೆ ಕೊಡುತ್ತಿರುವುದನ್ನು ಕೊಡುವುದಿಲ್ಲವೆಂದು ಹೇಳುವುದಕ್ಕೆ ಅಗತ್ಯ ಕ್ರಮವನ್ನು ತೆಗೆದುಕೊಂಡು ಅವರಿಗೆ ಕೊಡುವಂತೆ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಡಾ॥ ವೈ. ನಾಗಪ್ಪ: ನಮ್ಮ ಅಧಿಕಾರಿಗಳನ್ನು ಕೇಳಿ, ಇದು ಬಂದಿದ್ದರೆ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಕೆ. ರಘುಪತಿ ಭಟ್ (ಉಡುಪಿ): ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ, ಬೋವಿ ಜನಾಂಗ ಇಡೀ ರಾಜ್ಯದಲ್ಲಿ ಎಸ್‌ಸಿ ಕೋಟಾದಲ್ಲಿ ಎಲ್ಲಾ ಕಡೆ ಇದೆ, ಆದರೆ ನಮ್ಮ ಉಡುಪಿ ಜಿಲ್ಲೆಯಲ್ಲಿ ಬೋವಿ ಜನಾಂಗದವರನ್ನು ಎಸ್‌ಸಿ ಎಂದು ಸರ್ಟಿಫಿಕೇಟ್ ಕೊಡುವುದಿಲ್ಲ; ಅದರಲ್ಲಿನ ವಿಪರ್ಯಾಸವೇನೆಂದರೆ ಅವರ ತಾಯಿ, ಮಕ್ಕಳನ್ನು ಎಸ್‌ಸಿ ಎಂದಾಗಿದೆ. ಎಸ್‌ಸಿ ಮಗನಿಗೆ ಎಸ್‌ಸಿ ಸರ್ಟಿಫಿಕೇಟ್ ಕೊಡಿ ಎಂದರೆ ಕೊಡುತ್ತಿಲ್ಲ, ನಾವು ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಕೊಟ್ಟರೆ ಅವರ ತಹಸಿಲ್ದಾರ್ ಹತ್ತಿರ ಚರ್ಚೆ ಮಾಡುತ್ತೇವೆಂದು ಹೇಳಿದರು, ತಹಸಿಲ್ದಾರ್‌ರವರು ಏಕಾಏಕಿಯಾಗಿ

ಅದನ್ನು ಮಾಡಬಾರದೆಂದು ಮಾಡುತ್ತಿದ್ದಾರೆ. ಬೋವಿ ಜನಾಂಗವನ್ನು ಇಡೀ ರಾಜ್ಯದಲ್ಲಿ ಎಸ್‌ಸಿ ಜನಾಂಗಕ್ಕೆ ಸೇರಿಸಿದ್ದಾರೆ, ನಮ್ಮ ಉಡುಪಿ ಜಿಲ್ಲೆಯಲ್ಲಿ ಮಾತ್ರ ಅವರ ತಂದೆ ಎಸ್‌ಸಿ ರಿಸರ್ವೇಷನ್ ತೆಗೆದುಕೊಂಡಿದ್ದರು ಮಗನಿಗೆ ಎಸ್‌ಸಿ ಗೆ ತೆಗೆದುಕೊಳ್ಳುತ್ತಿಲ್ಲ, ಇದರ ಬಗ್ಗೆ ಸಚಿವರು ಗಮನಹರಿಸಬೇಕು.

ಡಾ॥ ವೈ. ನಾಗಪ್ಪ: ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ಬೋವಿ ಜನಾಂಗ ಕೆಲವೊಂದು ಜಿಲ್ಲೆಗಳಲ್ಲಿ ಅಷ್ಟೆ ಎಂದು ರೆಕಗ್ನೈಸ್ ಮಾಡಿದ್ದಾರೆ, ಎಲ್ಲಾ ಜಿಲ್ಲೆಯಲ್ಲಿರುವ ಬೋವಿ ಜನಾಂಗದವರನ್ನು ಎಸ್‌ಸಿ ಎಂದು ತೆಗೆದುಕೊಂಡಿಲ್ಲ, ಬಹುಶಃ ಆ ದೃಷ್ಟಿಯಿಂದ ಇದನ್ನು ಬಿಟ್ಟಿರಬಹುದು. ಎರಡನೆಯಾದಾಗಿ ಅವರೇನು ಸರ್ಟಿಫಿಕೇಟ್ ಬಗ್ಗೆ ಹೇಳಿದರು, ಇದಕ್ಕೆ ಕೆಲವು ನಿಯಮಗಳಿವೆ, ಮಕ್ಕಳಿಗೆ ಸ್ಕೂಲ್ ಸರ್ಟಿಫಿಕೇಟ್ ಇರಬೇಕು, ಇಲ್ಲವೆಂದರೆ ಅಫಿಡವೇಟ್ ಸಲ್ಲಿಸಿ ಪ್ರಮಾಣ ಪತ್ರ ಪಡೆದುಕೊಂಡು ಅರ್ಜಿ ಮೂಲಕ ಇದನ್ನು ಕಳುಹಿಸಿಕೊಟ್ಟರೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಪ್ರಭಾಕರ್ ಬಂಗೇರ್‌ರವರು ಹೇಳಿದಂತೆ, ಈ ಕೋಲಾರ ಜಿಲ್ಲೆಯಲ್ಲೂ ಕೂಡ ಈ ಚೆನ್ನಿದಾಸರಿದ್ದು, ಅವರಿಗೆ ಕಳೆದ ವರ್ಷ ಸರ್ಟಿಫಿಕೇಟ್ ಕೊಟ್ಟಿದ್ದಾರೆ, ಈ ವರ್ಷ ಇದ್ದಕ್ಕಿದ್ದ ಹಾಗೆ ನೀವು ಎಸ್‌ಸಿ ಅಲ್ಲವೆಂದು ಹೇಳುತ್ತಾರೆ. ಯಾರು ಈ ಆಜ್ಞೆಯನ್ನು ಮಾಡಿದರು, ಅವರದು ಇರುವುದೆ ಬಹಳ ಕಡಿಮೆ ಜನಸಂಖ್ಯೆ, ಕಾರಣವೇನೆಂದರೆ ಗೊತ್ತಿಲ್ಲ, ಇದ್ದಕ್ಕಿದ್ದಂತೆ ನೀವು ಎಸ್‌ಸಿಗೆ ಬರುವುದಿಲ್ಲವೆಂದು ಹೇಳುತ್ತಾರೆ, ಅವರೆಲ್ಲಾ ಬಂದು ಗೋಳಾಡುತ್ತಾರೆ, ಕಳೆದ ವರ್ಷ ಎಸ್‌ಸಿ ಆಗಿದ್ದರು, ಈ ವರ್ಷ ಅಲ್ಲ ಕಾರಣ ಹೇಗೆ ಹೇಳಿ ಸ್ವಲ್ಪ?

ಶ್ರೀ ಹಂಪನಗೌಡ ಬಾದರ್ಲಿ: ನಮ್ಮ ಜಿಲ್ಲೆಯಲ್ಲೂ ಕೂಡ ಈ ರೀತಿಯ ಸಮಸ್ಯೆ ಇದೆ.

ಅಧ್ಯಕ್ಷರು: ಎಸ್‌ಸಿ ಸರ್ಟಿಫಿಕೇಟ್ ಬಗ್ಗೆ ಬಹಳ ಗೊಂದಲವಿದೆ, ಅದು ಎಲ್ಲರಿಗೂ ಗೊತ್ತಿರತಕ್ಕಂಥದ್ದು, ಸರ್ಕಾರ ಆ ಬಗ್ಗೆ ಸಮಗ್ರವಾಗಿ ವಿಮರ್ಶೆ ಮಾಡಿ ನಿಜವಾಗಿ ಯಾರು ಎಸ್‌ಸಿಗೆ ಸೇರುತ್ತಾರೆ, ಯಾರು ಎಸ್‌ಟಿಗೆ ಸೇರುತ್ತಾರೆ ಆ ಬಗ್ಗೆ ವಿಮರ್ಶೆ ಮಾಡಬೇಕು. ಈ ಸಮಸ್ಯೆ ಎಲ್ಲಾ ಕಡೆ ಇದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ತಮ್ಮ ಅಬ್ಸರ್ವೇಷನ್ ಸರಿ ಇದೆ, ಹೊಸದಾಗಿ ಸೇರ್ಪಡೆ ಮಾಡುವುದಕ್ಕೆ ಕೇಳುತ್ತಿದ್ದಾರೆ ....ಕಷ್ಟ.... ಯಾರು ಆ ಪಟ್ಟಿಯಲ್ಲಿದ್ದು ಅದರ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದರು, ಅವರ ಹೆಸರು ಏಕಾಏಕಿ ಹೆಸರು ಬಿಟ್ಟು ಹೋಗುತ್ತದೆ, ನಿಮಗೆ ಕೊಡಬಾರದೆಂದು ಸರ್ಕ್ಯೂಲರ್ ಬಂದಿದೆ ಎಂದು ಹೇಳುತ್ತಾರೆ, this is some thing you cannot digest ಇದು ಹೇಗಾಯಿತೆಂದೇ ಗೊತ್ತಾಗುತ್ತಿಲ್ಲ.

ಶ್ರೀ ಹಂಪನಗೌಡ ಬಾದರ್ಲಿ: ನಾನು ಹೇಳುವುದಿಷ್ಟೆ, ಕೇಂದ್ರ ಸರ್ಕಾರದ ನೋಟಿಫಿಕೇಷನ್‌ನಲ್ಲಿ ನಮ್ಮ ಶೂದ್ರಜಾತಿ ಎಸ್‌ಸಿ ಎಂದು ಪರಿಗಣಿಸಿದ್ದಾರೆ, ಆದರೆ ರಾಜ್ಯ ಸರ್ಕಾರದ ಪ್ರಕಟಣೆಯಲ್ಲಿ ಬಂದಿಲ್ಲ, ಇದು ಬಹಳಷ್ಟು ವರ್ಷಗಳಿಂದ ವೆಸ್ಟ್‌ಬೆಂಗಾಲ್ ಜನತೆಗೆ ನೆನೆಗುದಿಗೆಗೆ ಬಿದ್ದಿರುವಂತಹ ವಿಚಾರ.

ಶ್ರೀ ಹೆಚ್. ಆಂಜನೇಯ (ಭರಮಸಾಗರ): ಮಾನ್ಯ ಅಧ್ಯಕ್ಷರೆ, ನಮ್ಮ ಗೌರವಾನ್ವಿತ

ಸದಸ್ಯರಾದ ರಮೇಶ್ ಕುಮಾರ್‌ರವರು ಈ ಚಿನ್ನದಾಸರಿಗೆ ಜಾತಿ ಪ್ರಮಾಣಪತ್ರ ಕೊಡುವುದರಲ್ಲಿ, ಹಿಂದೆ ಕೊಟ್ಟರು ಈಗ ಕೊಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಎಸ್‌ಸಿ ಸರ್ಟಿಫಿಕೇಟ್ ಪಡೆಯವಲ್ಲಿ ಒಂದು ಹಗಲು ದರೋಡೆ ನಡೆಯುತ್ತಿದೆ. ಬೋವಿ ಎನ್ನುವ ಒಂದು ಸಮಾಜ ಮತ್ತೊಂದು ಸಮಾಜದಲ್ಲಿದೆ; ನಾವು ಬೋವಿಗಳೆಂದು ಹೇಳುತ್ತಿದ್ದಾರೆ. ನಾನು ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ, ಉತ್ತರ ಕರ್ನಾಟಕದಲ್ಲಿ ಮೊಗರೆ ಎನ್ನತಕ್ಕಂಥ ಒಂದು ಜಾತಿ ಇದೆ, ಅದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೇ ಒಂದು ತಾಲ್ಲೂಕಿನಲ್ಲಿ ಬರತಕ್ಕಂಥ ಜನಾಂಗ; ಮೊಲವನ್ನು ಬೇಟೆ ಆಡಿ ಜೀವನ ಮಾಡತಕ್ಕಂಥವರು. ಈ ಮೊಗವೀರ ಎನ್ನತಕ್ಕಂಥ ಮೀನುಗಾರರು ನಾವು ಮೊಗೆರರು ಎಂದು ಇವತ್ತು ಆ ಜಾತಿ ಪ್ರಮಾಣ ಪತ್ರವನ್ನು ಪಡೆಯುತ್ತಿದ್ದಾರೆ. ಮಾದಿಗರ ಮನೆಯಲ್ಲಿ ಬೇಡಿಕೊಂಡು ತಿನ್ನತಕ್ಕಂಥ ಬೇಡಜಂಗಮರು ಎಂದು ಹೇಳಿ ನಮ್ಮ ಮನೆ ಹತ್ತಿರ ಬಿಕ್ಷೆ ಎತ್ತಿಕೊಂಡು ತಿನ್ನತಕ್ಕಂಥ ಜನಾಂಗರಿದ್ದಾರೆ. ಇಡೀ ಕರ್ನಾಟಕ ರಾಜ್ಯದಲ್ಲಿ ಕೇವಲ 50 ಕುಟುಂಬಗಳಿರಬಹುದು ಅಷ್ಟೆ. ಇಲ್ಲಿರತಕ್ಕಂಥ ನಮ್ಮ ಪುರೋಹಿತರು ಐನೋರು ಎಂದು ಲಿಂಗಾಯಿತರಲ್ಲಿದ್ದಾರೆ, ಅವರೆಲ್ಲಾ ನಾವು ಬೇಡಜಂಗಮರೆಂದು ಜಾತಿಪ್ರಮಾಣ ಪತ್ರವನ್ನು ಪಡೆದು ಕೆಲವರು ಜಿಲ್ಲಾ ಪಂಚಾಯತಿ ಸದಸ್ಯರಾದವರು ಕೆಲವರು ಸರ್ಕಾರಿ ನೌಕರಿಯನ್ನು ಕೂಡ ಪಡೆದಿದ್ದಾರೆ ಕೆಲಸವರು ಇನ್ನೂ ಸರ್ಕಾರದ ಉನ್ನತ ಹುದ್ದೆಯನ್ನು ಪಡೆದುಕೊಂಡಿಬಿಟ್ಟಿದ್ದಾರೆ. ಆದುದರಿಂದ ಆ ಜಾತಿ ಪ್ರಮಾಣ ಪತ್ರವನ್ನು ಕೊಡುವಲ್ಲಿ ಸಮನಾಂತರ ಒಂದು ಪದವಿರುವುದರಿಂದ ಅವುಗಳ ಬಹಳ ದುರುಪಯೋಗವಾಗುತ್ತಿದೆ, ಬಹಳ ಕಟ್ಟಿನಿಟ್ಟಿನ ಎಚ್ಚರಿಕೆಯಿಂದ ಇವತ್ತು ಜಾತಿ ಪ್ರಮಾಣಪತ್ರವನ್ನು ಕೊಡುವಲ್ಲಿ ಸರ್ಕಾರ ನಿಗವಹಿಸಬೇಕು. ಬೇಕಾದರೆ ನನ್ನಲ್ಲಿ ಒಂದು ದಾಖಲೆ ಇದೆ, ಕಳೆದ ವರ್ಷ ಆತ ಬ್ಯಾಕ್‌ವರ್ಡ್ ಕ್ಲಾಸ್‌ನಲ್ಲಿ ಪ್ರಮಾಣಪತ್ರ ತೆಗೆದುಕೊಂಡಿದ್ದಾನೆ, ಈ ವರ್ಷ ಎಸ್‌ಸಿ ಎಂದು ಸರ್ಟಿಫಿಕೇಟ್ ತೆಗೆದುಕೊಂಡಿದ್ದಾನೆ, ನಾಳೆ ಬೇಕಾದರೆ ಅದನ್ನು ತಂದು ತಮಗೆ ಹಾಜರುಪಡಿಸುತ್ತೇನೆ. ಶ್ರೀ ರಮೇಶ್ ಕುಮಾರ್‌ರವರೇ, ಕಳೆದ ವರ್ಷ ನಾನು ಬ್ಯಾಕ್‌ವರ್ಡ್‌ಕ್ಲಾಸ್ ಎಂದು ಆತ ಜಾತಿ ಪ್ರಮಾಣಪತ್ರ ಪಡೆದುಕೊಂಡಿದ್ದಾನೆ, ಈ ವರ್ಷ ಎಸ್‌ಸಿ ಎಂದು ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದಾನೆ ಹೀಗೆ ಎರಡು ಸರ್ಟಿಫಿಕೇಟ್ ಆತ ಪಡೆದುಕೊಂಡಿರುವುದು ದಾಖಲೆ ನನ್ನ ಹತ್ತಿರವಿದೆ. ದಯಮಾಡಿ ಏನು ಎಸ್‌ಸಿ:ಎಸ್‌ಟಿ ಆಯೋಗವಿದೆ, ಅದು ಇದನ್ನೆಲ್ಲಾ ಪೂರ್ಣ ವಿಮರ್ಶೆ ಮಾಡಿ ಎಲ್ಲೆಲ್ಲಿ ಸಣ್ಣ ಸಣ್ಣ ಜಾತಿಗಳಿದ್ದಾವೆ, ಅವು ಯಾವ ಯಾವ ರೀತಿಯಲ್ಲಿ ದುರುಪಯೋಗವಾಗುತ್ತಿವೆಯೋ ಅದನ್ನು ತಡೆಗಟ್ಟಲಿಕೆ ಸಮಗ್ರವಾದ ವರದಿಯನ್ನು ತಂದು ಈ ಸದನದಲ್ಲಿ ಶಾಸನ ಮಾಡಿ, ಜಾತಿ ಪ್ರಮಾಣಪತ್ರವನ್ನು ಪಡೆಯುವಲ್ಲಿ ಏನೊಂದು ಹಗಲುದರೋಡೆ ನಡೆಯುತ್ತಿದೆ ಅದನ್ನು ತಡೆಯಬೇಕು ಯಾರಿಗೆ ನಿಜವಾಗಲೂ ಕೂಡ ಸೌಲಭ್ಯ ಸಿಗಬೇಕಾಗಿತ್ತೋ ಆ ಜನಾಂಗಕ್ಕೆ ಸಿಗುತ್ತಿಲ್ಲ, ಬೇರೆಯವರೆಲ್ಲಾ ಅದನ್ನು ಕಬಳಿಸತಕ್ಕ ಹಗಲು ದರೋಡೆ ತಡೆಗಟ್ಟಲಿಕ್ಕೆ ಸರ್ಕಾರ ಕಟ್ಟುನಿಟ್ಟಿನ ಕ್ರಮವನ್ನು ಜರುಗಿಸಬೇಕು. ತಾವು ಸಮಾಜ ಕಲ್ಯಾಣ ಮಂತ್ರಿಗಳು, ಯಾರೋ ಬಂದು ಹೇಳಿದ ತಕ್ಷಣ ಜಾತಿ ಪ್ರಮಾಣ ಪತ್ರ ಕೊಡಿ ಎಂದು ಹೇಳುವುದಾಗಲಿ, ಮಾಡುವುದಾಗಲಿ ಮಾಡಬಾರದು, ಎಲ್ಲಾ ಎಸ್‌ಸಿ ಶಾಸಕರನ್ನು ಒಂದು ವಿಶೇಷವಾದ ಸಭೆಗೆ ಕರೆದು, ನಮಗೆ ಎಲ್ಲೆಲ್ಲಿ ಯಾವ ರೀತಿಯಾಗಿ ಅನ್ಯಾಯವಾಗುತ್ತಿದೆ ಎಂಬುದು ಗೊತ್ತಿದೆ, ತಮ್ಮಿಂದ ಹಾಗೂ ಬೇರೆಯವರಿಂದಲೂ ಸಲಹೆಯನ್ನು ಪಡೆದು ಇದನ್ನು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ

ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಹರಪನ ಹಳ್ಳಿ): ಮಾನ್ಯ ಅಧ್ಯಕ್ಷರೆ, ಜಾತಿ ಪ್ರಮಾಣ ಪತ್ರದ ವಿಚಾರದಲ್ಲಿ ಹಿರಿಯ ಸದಸ್ಯರಾದ ಮಾನ್ಯ ರಮೇಶ್‌ಕುಮಾರ್‌ರವರು, ಮಾನ್ಯ ಬಾದರ್ಲಿ ಹಂಪನಗೌಡರು ಮತ್ತು ಮಾನ್ಯ ಆಂಜನೇಯರವರೂ ಕೂಡ ಸರ್ಕಾರದ ಗಮನವನ್ನು ಸೆಳೆದಿದ್ದಾರೆ, ನಿಜವಾದ ಅರ್ಹ ಆ ಒಂದು ಜಾತಿಗೆ ಸಲ್ಲತಕ್ಕಂಥ ಜಾತಿ ಪ್ರಮಾಣ ಪತ್ರದಲ್ಲಿ ಅನ್ಯಾಯ ಹಾಗೂ ಕೆಲವು ತೊಂದರೆಗಳೂ ಕೂಡ ಇವೆ. ಅದರ ಜೊತೆಗೆ ನಮ್ಮ ಹೆಸರಿನಲ್ಲಿ ಬೇರೆಯವರೂ ಕೂಡ ಈ ಜಾತಿ ಪ್ರಮಾಣ ಪತ್ರವನ್ನು ಪಡೆದಿರತಕ್ಕಂಥ ಅನೇಕ ಉದಾಹರಣೆಗಳು ಇವೆ. ಹಾಗಾಗಿ ಇವತ್ತು ಬೇಡಜಂಗಮವೆನ್ನುವವರು, ಎಸ್‌ಸಿ ಜಾತಿ ಪ್ರಮಾಣ ಪತ್ರವನ್ನು ತೆಗೆದುಕೊಳ್ಳುತ್ತಿದ್ದಾರೆ, ನಾವು ಆ ಜಾತಿಗೆ ಸಂಬಂಧಪಟ್ಟವರು ನಾವು ಎಲ್ಲಿಗೆ ಹೋಗಬೇಕೆನ್ನುವ ಪ್ರಶ್ನೆಯನ್ನು ನಮ್ಮಷ್ಟಕ್ಕೆ ನಾವೇ ಹಾಕಿಕೊಳ್ಳುವಂತಹ ವಾತಾವರಣ ನಿರ್ಮಾಣವಾಗಿದೆ ಈ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಸಚಿವರು, ಈ ಬಗ್ಗೆ ಒಂದು ಕಟ್ಟುನಿಟ್ಟಾದ ಒಂದು ಶಾಸನವನ್ನು ಮಾಡಿ, ಸಂಬಂಧಪಟ್ಟ ಜಾತಿಯವರಿಗೆ ಮಾತ್ರ ಜಾತಿ ಪ್ರಮಾಣ ಪಡೆಯುವುದಕ್ಕೆ ಅನುಕೂಲವಾಗುವಂತೆ ಜಾರಿ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ (ಮುದ್ದೆಬಿಹಾಳ್): ಸನ್ಮಾನ್ಯ ಅಧ್ಯಕ್ಷರೆ, ಬೋವಿ ಎನ್ನುವ ಜನಾಂಗ ಈ ಒಡ್ಡರ ಸಮಾಜದಲ್ಲೂ ಇದೆ, ಇನ್ನೊಂದು ಸಮಾಜದಲ್ಲೂ ಬೋವಿ ಸಮಾಜವಿದೆ. ಆ ಬೋವಿ ಸಮಾಜದ ಮೂಲ ವೃತ್ತಿ ಏನೆಂದರೆ ಈ ಮೇಣಿ ಅಥವಾ ಪ್ಯಾಲಂಕ್ವಿನ್ ಎನ್ನುತ್ತೇವೆ ಅದನ್ನು ರಾಜಮಹಾರಾಜರ ಕಾಲದಿಂದಲೂ ಅದನ್ನು ಹೊತ್ತಿಕೊಂಡು ಹೋಗತಕ್ಕಂಥದ್ದು ಅವರ ವೃತ್ತಿಯಾಗಿದೆ. ನಿಜಕ್ಕೂ ಕೂಡ ಬಹಳಷ್ಟು ಜಿಲ್ಲೆಗಳಲ್ಲಿ ಅದನ್ನು ಪರಿಗಣಿಸಿ, ಅವರಿಗೆ ಎಸ್‌ಸಿ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ನೀವು ಒಡ್ಡರ ಬೋವಿಯಲ್ಲಿ 'BHUVI' ಒಡ್ಡರು ಬೋವಿ ನೀವು ಬರುವುದಿಲ್ಲ ಕೊಡುವುದಿಲ್ಲವೆನ್ನುತ್ತಾರೆ, ಆದರೆ ಇವರು ವೃತ್ತಿಯಿಂದಲೂ ನೋಡಿದರೂ ಕೂಡ ಎಸ್‌ಸಿಗೆ ಸೇರತಕ್ಕಂಥವರೇ ಇವರ ಆದಾಯವೇನೂ ಇಲ್ಲ, ಜಮೀನಿಲ್ಲ, ಹೊಲವಿಲ್ಲ. ಅದಕ್ಕೋಸ್ಕರ ಎಲ್ಲೆಲ್ಲಿ ಇಂತಹ ಸರ್ಟಿಫಿಕೇಟ್ ಇಷ್ಯೂ ಆಗುತ್ತಿಲ್ಲ, ಮೂಲತಃ ಅವರ ಹಿನ್ನೆಲೆಯನ್ನು ಪಡೆಯಬೇಕು, ಕೇವಲ, ಈ ಕ್ಯಾಟಗರಿಯಲ್ಲಿ ಇಲ್ಲವೆಂದು, ತಪ್ಪು ಅರ್ಥ ಮಾಡಿಕೊಂಡು ಕೊಡತಕ್ಕಂಥದ್ದು ಆಗಬಾರದು, ಸಮಗ್ರವಾಗಿ, ಬಿಜಾಪುರ ಜಿಲ್ಲೆಯಲ್ಲಿ, ಗುಲ್ಬರ್ಗಾ ಜಿಲ್ಲೆಯಲ್ಲಿ, ಉಡುಪಿಯಲ್ಲಿ ಕೊಡುತ್ತಿಲ್ಲ, ರಾಯಚೂರಿನಲ್ಲಿ ಬಹಳಷ್ಟು ಜನಾಂಗವಿದ್ದಾರೆ. ಅದಕ್ಕೆ ಈ ಬಗ್ಗೆ ತಾವು ಒಮ್ಮೆ ವರದಿಯನ್ನು ತರಿಸಿ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಡಾ॥ ವೈ. ನಾಗಪ್ಪ: ಮಾನ್ಯ ಅಧ್ಯಕ್ಷರೆ, ತಾವು ಹೇಳಿದಂತೆ ಈ ಒಂದು ವಿಷಯ ಬಹಳ ಗೊಂದಲಮಯವಾಗಿದೆ, ಒಂದು ಕಡೆ ಎಸ್‌ಸಿ:ಎಸ್‌ಟಿ, ಬ್ಯಾಕ್‌ವರ್ಡ್‌ಕ್ಲಾಸ್ ಜನರು ಒಂದು ಕಡೆ ಇದ್ದಾರೆ, ಈ ಒಂದು ಸರ್ಟಿಫಿಕೇಟ್ ಕೊಡುವಾಗ ಸಾಕಷ್ಟು ತನಿಖೆಗೆ ಅವರನ್ನು ನಾವು ಒಳಪಡಿಸುತ್ತಿದ್ದೇವೆ, ಅದಕ್ಕೆ ಇಲಾಖೆಗಳಿದ್ದಾವೆ ಎತ್ನೋಗ್ರಾಫಿಕ್ ಸ್ಟಡಿಗೆ ಅವರನ್ನು ಒಳಪಡಿಸುತ್ತೇವೆ, ಸರ್ಟಿಫಿಕೇಟ್ ಕೊಡುವಾಗ ಅದಕ್ಕಾಗಿ ಒಂದು ಸಿಆರ್ ಸೇಲ್ ಎಂದಿದೆ. ಅಲ್ಲಿಗೆ ನಾವು ಎಲ್ಲಾ ಅರ್ಜಿಗಳನ್ನು ಕಳುಹಿಸಿಕೊಡುತ್ತೇವೆ. ಯಾರು ಅಪಾಯಿಂಟ್‌ಮೆಂಟ್ ಆರ್ಡರನ್ನು

ತೆಗೆದುಕೊಂಡಿರುತ್ತಾರೋ ಅವರ ಅರ್ಜಿಗಳು ಅಲ್ಲಿಗೆ ಹೋಗುತ್ತೆ. After verification only, those appointments have been accepted. ಕೆಲವರು ಸರ್ಟಿಫಿಕೇಟನ್ನು ತೆಗೆದುಕೊಂಡಿದ್ದಾರೆ. ಅಂತಹ ಸರ್ಟಿಫಿಕೇಟುಗಳನ್ನು ವಾಪಸ್ ಕೂಡ ತೆಗೆದುಕೊಂಡಿದ್ದೇವೆ. ಮತ್ತೆ ಅವರಿಗೆ ಶಿಕ್ಷೆಯನ್ನೂ ಕೂಡ ಕೊಟ್ಟಿದ್ದೆವೆ. ಆ ಒಂದು ದೃಷ್ಟಿಯಿಂದ ತಾವು ಅದರ ಬಗ್ಗೆ ಕಳವಳಪಡಬೇಕಾಗಿಲ್ಲ. ನಾನೊಬ್ಬ ಹಿಂದುಳಿದ ವರ್ಗಕ್ಕೆ ಸೇರಿರತಕ್ಕ ಮನುಷ್ಯ. ನಿಮ್ಮಲ್ಲೇ ನಾನು ಗುರುತಿಸಿಕೊಂಡಿದ್ದೇನೆ. ಹಾಗೆ ಆಗುವುದಕ್ಕೆ ಬಿಡುವುದಿಲ್ಲ. ಈ ಒಂದು ಇಲಾಖೆಯಲ್ಲಿ ಏನೂ ಆಗಬಾರದ್ದು ಆಗಿಲ್ಲ. ಇನ್ನು ಮುಂದೆ ನಾವು ಅದನ್ನು ಸರಿಯಾಗಿ ಕೂಲಂಕುಷವಾಗಿ ಅದರ ಬಗ್ಗೆ ಚರ್ಚೆ ಮಾಡಿ ಆ ವಿಷಯ ಸಂಗ್ರಹಣೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ಯಾವ ಒಂದು ಹಿಂದುಳಿದ ವರ್ಗಕ್ಕಾಗಲಿ, ಎಸ್‌ಸಿ ಎಸ್‌ಟಿಗಾಗಲಿ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲ ಎಂದು ನಾನು ಅಧ್ಯಕ್ಷರ ಮೂಲಕ ತಮಗೆ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಪ್ಪ ಖೂಬ ಅವರ ಪ್ರಶ್ನೆ.

– ಮಾನ್ಯ ಸದಸ್ಯರು ಗೈರಹಾಜರಾಗಿದ್ದರು –

ಈಗ ಮಾನ್ಯ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು.

ವಿಶ್ವಬ್ಯಾಂಕಿನಿಂದ ರೇಷ್ಮೆ ಅಭಿವೃದ್ಧಿಗೆ ಪಡೆದಿರುವ ಹಣ

115 (1683) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರೇಷ್ಮೆ ಅಭಿವೃದ್ಧಿಗಾಗಿ ವಿಶ್ವಬ್ಯಾಂಕ್‌ನಿಂದ ಮೊದಲನೇ ಹಂತದ ಯೋಜನೆಗೆ ಹಾಗೂ 2ನೇ ಹಂತದ ಯೋಜನೆಗೆ ಪಡೆದಿರುವ ಸಾಲ ಎಷ್ಟು ;

ಆ) ಈ ಹಣದಿಂದ ಕೈಗೊಂಡ ಯೋಜನೆಗಳು ಯಾವುವು (ವಿವರಗಳನ್ನು ಯೋಜನೆವಾರು ಕಾಮಗಾರಿವಾರು ನೀಡುವುದು) :

ಇ) ಮೊದಲನೇ ಹಾಗೂ ಎರಡನೇ ಹಂತದ ವಿಶ್ವಬ್ಯಾಂಕ್ ಸಾಲದ ಹಣದಿಂದ ಕಟ್ಟಡಗಳ ನಿರ್ಮಾಣಕ್ಕೆ ವೆಚ್ಚ ಮಾಡಿರುವ ಹಣದ ವಿವರಗಳನ್ನು ನೀಡುವುದು ?

ಶ್ರೀ ಸಿ. ಚೆನ್ನಿಗಪ್ಪ (ರೇಷ್ಮೆ ಸಚಿವರು) :

ಅ) ಒಂದನೇ ಹಂತದ 1980 ರಿಂದ 1987ರ ಕರ್ನಾಟಕ ರೇಷ್ಮೆ ಯೋಜನೆಗೆ ರೂ. 101.13 ಕೋಟಿ.

ಎರಡನೇ ಹಂತದ 1989 ರಿಂದ 1996ರ ರಾಷ್ಟ್ರೀಯ ರೇಷ್ಮೆ ಯೋಜನೆಗೆ ರೂ. 142.84 ಕೋಟಿ.

ಆ) ಈ ಹಣದಿಂದ ಕೈಗೊಂಡ ಯೋಜನೆಗಳ ವಿವರಗಳು ಕೆಳಕಂಡಂತಿವೆ

I. ಕರ್ನಾಟಕ ರೇಷ್ಮೆ ಯೋಜನೆ:

ಕಾರ್ಯಕ್ರಮ	ವೆಚ್ಚ (ರೂ. ಕೋಟಿಗಳಲ್ಲಿ)
1. ಕೃಷಿ ಸಾಲ	7.68